# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 609/2015 ಸಿಡಬ್ಲೂ : 17 ಪಿಡಬ್ಲೂಃ 7

ಪ್ರಮಾಣವಚನ ಬೋಧಿಸಲಾಯಿತು ದಿಃ 22-08-2025

ಹೆಸರು : ಪಂಚಾಕ್ಷರಿ

ತಂದೆ ಹೆಸರು : ವೀರಯ್ಯ ಸಾಲಿಮಠ

ವಯಸ್ಸು : 44 ವರ್ಷ

ಉದ್ಯೋಗ : ಪಿ ಐ ಕೇಂದ್ರ ಕಛೇರಿ, ಬೆಂಗಳೂರು

ವಾಸಸ್ಥಳ : ಬೆಂಗಳೂರು

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 12-05-2015 ರಿಂದ 10-10-2018 ವರೆಗೆ ಸೇಡಂ ವೃತ್ತ ನೀರೀಕ್ಷರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಅವದಿಯಲ್ಲಿ ದಿಃ 15-05-2015 ರಂದು ಚಾ ಸಾ 16 ರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಸದರಿ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾದ ವಾಹನದ ಎಂ ವಿ ಎ ವರದಿಯನ್ನು ಚಾ ಸಾ 12 ರವರಿಂದ ಸ್ವಿಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯ ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 7 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮೃತ ಮಹಾನಂದ ವೀರಾಸ್ವಾಮಿ ರವರ ಪಿ ಎಂ ವರದಿಯನ್ನು ಚಾ ಸಾ 13 ರವರಿಂದ ಪಡೆದುಕೊಂದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಿ ಎಂ ವರದಿಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿ ಪಿ 8 ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 8(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಗಾಯಾಳಾದ ಚಾ ಸಾ 9 ರವರ ಕ್ಷೆ-ಕಿರಣವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಅದನ್ನು ಗುರುತಿಸಿರುವುದರಿದ ಅದನ್ನು ನಿ ಪಿ 9 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 9(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಅಪಘಾತಕ್ಕೆ ಒಳಗಾದ ಲಾರಿ ನಂ. ಎಂ ಎಚ್ 12 ಎಚ್ ಡಿ 4724 ನೇದ್ದರ ಭಾವ ಚಿತ್ರಗಳನ್ನು ನೋಡಿ ಗುರುಸಿದ್ದು ಅದನ್ನು ಈಗಾಗಲೆ ನಿ ಪಿ 2 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಗಿದೆ. ಅದೇ ರೀತಿ ಅಪಘಾತಕ್ಕೆ ಒಳಗಾದ ಮೋಟಾರು ಸೈಕಲ್

ನೇದ್ದರ ಭಾವ ಚಿತ್ರಗಳನ್ನು ನೋಡಿ ಗುರುಸಿದ್ದು ಅದನ್ನು ಈಗಾಗಲೆ ನಿ ಪಿ 3 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಸಿ ಬಿ ವಕೀಲರಿಂದಃ

ಈ ಅವದಿಯಲ್ಲಿ ದಿಃ 15-05-2015 ರಂದು ಚಾ ಸಾ 16 ರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಸದರಿ ಪ್ರಕರಣದಲ್ಲಿ ಅಪಘಾತಕ್ಕೆ ಒಳಗಾದ ವಾಹನದ ಎಂ ವಿ ಎ ವರದಿಯನ್ನು ಚಾ ಸಾ 12 ರವರಿಂದ ಸ್ವಿಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಮೃತ ಮಹಾನಂದ ವೀರಾಸ್ವಾಮಿ ರವರ ಪಿ ಎಂ ವರದಿಯನ್ನು ಚಾ ಸಾ 13 ರವರಿಂದ ಪಡೆದುಕೊಂದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಗಾಯಾಳಾದ ಚಾ ಸಾ 9 ರವರ ಕ್ಷೆ-ಕಿರಣವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಅಪಘಾತಕ್ಕೆ ಒಳಗಾದ ಲಾರಿ ನಂ. ಎಂ ಎಚ್ 12 ಎಚ್ ಡಿ 4724 ನೇದ್ದರ ಭಾವ ಚಿತ್ರಗಳನ್ನು ನೋಡಿ ಗುರುಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ಅಪಘಾತಕ್ಕೆ ಒಳಗಾದ ಮೋಟಾರು ಸೈಕಲ್ ನೇದ್ದರ ಭಾವ ಚಿತ್ರಗಳನ್ನು ನೋಡಿ ಗುರುಸಿದ್ದುರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಈ ಪ್ರಕರಣದಲ್ಲಿ ಆರೋಪಿತರ ವಿರುದ್ದ ಯಾವುದೇ ಸಾಕ್ಷಾದಾರ ಇರದೇ ಇದ್ದರೂ ಸಹ ಅವರ ವಿರುದ್ದ ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**